

ರಾಯಚೂರಿನಲ್ಲಿ ಪ್ರವಾಹ ಸಂತ್ರಸ್ಥರಿಗೆ ಅಮ್ಮ ನಿರ್ಮಿಸಿಕೊಟ್ಟ ಮನೆಗಳು

ಬಾಲಕಿಯಾಗಿದ್ದಾಗ ಅಮ್ಮನ ಮನಸ್ಸಿನಲ್ಲಿ ಧ್ಯಾನಕ್ರಮವೊಂದು ಮೂಡಿತ್ತು. ಮುಂದೆ 2003ರಲ್ಲಿ ಜಗತ್ತಿನ 191 ದೇಶಗಳು ಅಮ್ಮನ 50ನೇ ಜನ್ಮದಿನವನ್ನು 3 ದಿನಗಳ 'ಅಮೃತವರ್ಷಂ 50"ಎಂಬ ಉತ್ಸವವಾಗಿ ಆಚರಿಸಲು ಕೊಚ್ಚಿ ನಗರದಲ್ಲಿ ಸೇರಿದಾಗ, ಆ ಸಂದರ್ಭದಲ್ಲಿ ಅಮ್ಮ IAM (Integrated Amrita Meditation) ಧ್ಯಾನವನ್ನು ಜಗತ್ತಿಗೆ ಉಡುಗೊರೆಯಾಗಿ ನೀಡಿದರು.

ಇಂದು ಮನುಷ್ಯನ ದೇಹಮನಗಳಿಗೆ, ಬುದ್ಧಿಭಾವಗಳಿಗೆ, ನಿತ್ಯಜೀವನಕ್ಕೆ ಮತ್ತೆ ಅಂತರ್ಜಾಗೃತಿಗೆ ಸಹಾಯಕವಾಗುವ ಈ ಧ್ಯಾನವನ್ನು ಉಚಿತವಾಗಿ ಜಗತ್ತಿನಾದ್ಯಂತ ಕಲಿಸಲಾಗುತ್ತಿದೆ. ಇದುವರೆಗೆ ಲಕ್ಷಾಂತರ ಜನರು ಇದರ ಪ್ರಯೋಜನವನ್ನು ಪಡೆದುಕೊಂಡಿದ್ದಾರೆ.

## ಪ್ರಕೃತಿ ಪ್ರೇಮ

'ಸನಾತನ ಧರ್ಮದ ಪ್ರಕಾರ ಸೃಷ್ಟಿಯೂ ಸೃಷ್ಟಿಕರ್ತನೂ ಭಿನ್ನರಲ್ಲ. ಪ್ರಕೃತಿಯೇ ಪ್ರತ್ಯಕ್ಷ ದೈವ' ಎಂದು ಅಮ್ಮ ಆಗಾಗ ನೆನಪಿಸುತ್ತಾರೆ. 'ಮನುಷ್ಯನ ದುರಾಸೆ ಮತ್ತು ಪ್ರಕೃತಿಯ ಬಗ್ಗೆ ಅವನ ಅನಾದರ –ಈ ಎರಡು ಕಾರಣಗಳಿಂದಾಗಿ ಇಂದು ಪ್ರಕೃತಿಯ ಸಮತೋಲನ ಕೆಡುತ್ತಿದೆ. ಬರ, ಭೂಕಂಪ, ಸುನಾಮಿ, ಪ್ರವಾಹ, ಮುಂತಾದ ದುರಂತಗಳಿಗೆ ಇದೇ ಕಾರಣ' ಎನ್ನುವ ಅಮ್ಮ, 'ಹಿಂದಿನ ಕಾಲದಲ್ಲಿ ಜನರು ಪ್ರಕೃತಿಯನ್ನು ಆರಾಧಿಸುತ್ತಿದ್ದ ಕಾರಣ ಪ್ರಕೃತಿಯ ಶೋಷಣೆಯಾಗುತ್ತಿರಲಿಲ್ಲ. ಆ ಸಮತೋಲನವನ್ನು ನಾವು ಮರಳಿ ಪಡೆದುಕೊಳ್ಳಬೇಕಿದೆ' ಎನ್ನುತ್ತಾರೆ.

'ಮಕ್ಕಳೆ, ಮನೆಗಳನ್ನು ಕಟ್ಟಲು ಮರಗಳನ್ನು ಕೆಡವಬೇಕಾಗಿ ಬಂದಾಗ ನಮ್ಮ ಹಿರಿಯರು ಒಂದು ಶುಭದಿನದಂದು ಅದಕ್ಕೆ ಪೂಜೆಮಾಡಿ, ಆ ಮರವು ಅದುವರೆಗೆ ನೀಡಿದ ಹೂವು ಹಣ್ಣು ನೆರಳು ಇತ್ಯಾದಿಗಳಿಗೆ ಧನ್ಯವಾದ ಅರ್ಪಿಸಿ, ಕ್ಷಮೆ ಯಾಚಿಸಿ, ನಂತರ ಅದನ್ನು ಕಡಿಯುತ್ತಿದ್ದರು. ಪ್ರಕೃತಿಯ ಬಗ್ಗೆ ಅಂಥ ಕೃತಜ್ಞತೆಯ ಭಾವ ನಮಗಿರಬೇಕು' ಎನ್ನುವ ಅಮ್ಮ, ಯೂರೋಪ್ ಮೊದಲುಗೊಂಡು ಜಗತ್ತಿನ ಹಲವೆಡೆ ಹಣ್ಣಿನ ಮರಗಳ ಸಸಿಗಳನ್ನು ನೆಡುವ, ಅರಣ್ಯ ಬೆಳೆಸುವ, ಔಷಧೀಯ ಸಸ್ಯಗಳನ್ನು ಪೊರೆಯುವ ಯೋಜನೆಗಳನ್ನು, ಜೈವಿಕ ಕೃಷಿಗಾರಿಕೆಯನ್ನೂ 'ಅಮೃತ ಯುವ ಧರ್ಮ ಧಾರಾ (ಅಯುದ್ಧ್)' ಮತ್ತು 'ಗ್ರೀನ್‌ಫ್ರೆಂಡ್ಸ್' ಸಂಘಟನೆಗಳ ಮೂಲಕ ನಡೆಸುತ್ತಿದ್ದಾರೆ.

'ಒಂದು ಸಣ್ಣ ಸೂತ್ರ ಸಹ ಅಮುಖ್ಯವಲ್ಲ. ಪ್ರತಿಯೊಂದು ವಸ್ತುವಿನಲ್ಲೂ ಒಂದೇ ಚೈತನ್ಯವೇ ಭರಿತವಾಗಿದೆ; ಆಧುನಿಕ ವಿಜ್ಞಾನ ಸಹ 'ಎಲ್ಲವೂ ಎನರ್ಜಿಯೇ' ಎಂದು ಕಂಡುಕೊಂಡಿದೆ' ಎಂಬ ವಾಸ್ತವಸತ್ಯವನ್ನು ತಿಳಿಸುವ ಅಮ್ಮ, ತ್ಯಾಜ್ಯವಸ್ತುಗಳ ನಿರ್ವಹಣೆಗೂ ಒತ್ತುನೀಡುತ್ತಾರೆ. ತನ್ಮೂಲಕ ಶುಚಿತ್ವ, ಪ್ರಕೃತಿಪ್ರೇಮ, ಆಧ್ಯಾತ್ಮ–ಇವುಗಳ ಅವಿನಾಸಂಬಂಧದ ಅರಿವು ಮೂಡಿಸುತ್ತಿದ್ದಾರೆ.



## ಅಂತರ್ರಾಷ್ಟ್ರೀಯ ಪುರಸ್ಕಾರಗಳು

ವಿಶ್ವಶಾಂತಿ, ಸಂಘರ್ಷ ನಿವಾರಣೆ, ಪ್ರಕೃತಿಪಾಲನೆ, ಲಿಂಗಭೇದ, ಮುಂತಾದ ಜ್ವಲಂತ ವಿಷಯಗಳ ಬಗ್ಗೆ ಅಮ್ಮನ ಸಲಹೆ ಸೂಚನೆಗಳು ದಶಕಗಳಿಂದಲೂ ವಿಶ್ವಸಂಸ್ಥೆಯೇ ಮೊದಲಾಗಿ ವಿವಿಧ ಅಂತರ್ರಾಷ್ಟ್ರೀಯ ವೇದಿಕೆಗಳ ಮೂಲಕ ಜಗತ್ತಿಗೆ ತಲುಪುತ್ತಿದೆ.

ಅನೇಕ ಜಾಗತಿಕ ಪುರಸ್ಕಾರಗಳು ಅಮ್ಮನನ್ನು ಅರಸಿಕೊಂಡು ಬಂದಿವೆ. ಮುಖ್ಯವಾಗಿ, 'ಗಾಂಧಿ ಕಿಂಗ್ ಶಾಂತಿ ಪುರಸ್ಕಾರ' (ವಿಶ್ವಸಂಸ್ಥೆ, ಜಿನೀವಾ, 2002); 'ಜೇಮ್ಸ್ ಪಾರ್ಕ್ ಮಾರ್ಟನ್ ಇಂಟರ್ ಫೇತ್ ಅವಾರ್ಡ್' (ನ್ಯೂ ಯಾರ್ಕ್, 2006); 'ಪ್ರಿಕ್ಸ್ ಸಿನೆಮಾ ವೆರಿಟೆ ಪ್ರಶಸ್ತಿ' (ಪ್ಯಾರಿಸ್, 2007) ಹಾಗೂ 'ಗೌರವ ಡಾಕ್ಟರೇಟ್' (ನ್ಯೂ ಯಾರ್ಕ್, ಬಫಲೋ ಯೂನಿವರ್ಸಿಟಿ, 2010)

Amma presents the kind of leadership we need for our planet to survive. She is the most heroic person I've probably ever met. Because she is sitting there hugging people. This is the most heroic thing that any of us could do now.

**– Alice Walker,**
Winner of the Pulitzer Prize for Fiction

## ಪ್ರೇಮ: ಅಮ್ಮನ ಸಹಜ ಸ್ವಭಾವ

ಪಶ್ಚಿಮ ದೇಶಗಳ ಮೀಡಿಯಾ ಅಮ್ಮನನ್ನು 'ದಿ ಹಗ್ಗಿಂಗ್ ಸೇಂಟ್' ಎಂದೇ ಪ್ರೀತಿಯಿಂದ ಕರೆಯುತ್ತದೆ. ಪತ್ರಕರ್ತರು ಕೇಳುವ ಪ್ರಶ್ನೆಗಳಿಗೆ ಅಮ್ಮ ಅತ್ಯಂತ ಅನೌಪಚಾರಿಕ ರೀತಿಯಲ್ಲಿ ಉತ್ತರ ಹೇಳುತ್ತಾರೆ. 'ತಾವು ಯಾಕೆ ಎಲ್ಲರನ್ನೂ ಹಗ್ ಮಾಡುವುದು?' ಎಂದು ಒಬ್ಬಾತ ಕೇಳಿದಾಗ ಅಮ್ಮ 'ಮಗನೆ, ನದಿ ಯಾಕೆ ಹರಿಯುತ್ತದೆ? ಸೂರ್ಯ ಯಾಕೆ ಬೆಳಗುತ್ತಾನೆ? ಎಂದು ಕೇಳಿದರೆ ಏನು ಹೇಳುವುದು? ಅದು ಅದರ ಸ್ವಭಾವ. ಆಲಿಂಗಿಸಿ ಪ್ರೇಮ ನೀಡುವುದು ಅಮ್ಮನ ಸ್ವಭಾವ' ಎಂದರು.

'ನೀವು ಏನಾಗಬಯಸುತ್ತೀರಿ?' ಎಂದು ಒಬ್ಬಾತ ಕೇಳಿದಾಗ ಅಮ್ಮ, 'ನಾನು ಮನುಕುಲದ ಮನಸ್ಸಿನ ಕಲ್ಮಷವನ್ನು ತೊಡೆದುಹಾಕುವ ಪೊರಕೆ ಆಗಬಯಸುವೆ' ಎಂದರು ಅತ್ಯಂತ ವಿನೀತಭಾವದಿಂದ.

'ಪ್ರಕಟವಾಗದ ಪ್ರೇಮ ಕಲ್ಲಿನೊಳಗಿನ ಜೇನಿನಂತೆ; ಅದರಿಂದ ಯಾರಿಗೂ ಪ್ರಯೋಜನವಿಲ್ಲ. ಪ್ರೇಮವು ಪ್ರಕಟವಾಗಬೇಕು. ಕರುಣೆಯ ಕೃತಿಗಳಾಗಬೇಕು.'

**(ಹೆಚ್ಚಿನ ಮಾಹಿತಿಗೆ: www.amritapuri.org ಮತ್ತು www.embracingtheworld.org)**